ಅಸ್ಫಾರ್ಟ್ ಮಾಡಿದ್ದರಿಂದ ಬಹಳವಾಗಿ ಗುಂಡಿಗಳಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಎಲ್ಲೆಲ್ಲಿ ಬಹಳವಾಗಿ ಗುಂಡಿಗಳಾಗಿವೆ ಅಂಥ ಕಡೆ ಕೆಲಸವನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಮೊದಲನೆ ರಸ್ತೆಗೆ 1,50,000 ರೂಪಾಯಿಗಳನ್ನು ಮತ್ತು 2ನೇ ರಸ್ತೆಗೆ 2,52,000 ರೂಪಾಯಿಗಳನ್ನು ಒದಗಿಸಲು ಪ್ರಾಪಿಷನ್ ಮಾಡಲಾಗಿದೆ. ಮತ್ತು ಆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ,—ಒಂದು ಕಡೆ ರಸ್ತೆ 11 ಮೈಲಿ ಮತ್ತೊಂದು ಕಡೆ ರಸ್ತೆ 30 ಮೈಲಿ ಇದೆ ಆ ಪೈಕಿ 2—3 ಮೈಲಿ ರಸ್ತೆ ರಿಪೇರಿ ಮಾಡಿ ಕೈಬಿಡುತ್ತಾರೆ. ನಂತರ 6 ತಿಂಗಳೋ ವರ್ಷವೋ 2 ವರ್ಷವೋ ಕಳೆದ ಮೇಲೆ ರಿಪೇರಿ ಮಾಡುತ್ತಾರೆ. ಅದನ್ನು ತಪ್ಪಿಸಿ ಒಂದೇ ವರ್ಷದಲ್ಲಿ ಪೂರ್ಣ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಒಂದೇ ವರ್ಷದಲ್ಲಿ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಒಟ್ಟು 4 ಎಸ್ಟಿಮೇಟುಗಳನ್ನು ಮಾಡಿ ಇವುಗಳ ಜೊತೆಗೆ ಇನ್ನೊಂದು ಕೆಲಸವನ್ನು ತೆಗೆದುಕೊಳ್ಳುವ ಪ್ರಪೋರ್ಟಾಡು ಮಾಡಿದ್ದೇವೆ. ಮುಳಿಗಾಲದಲ್ಲಿ ಅಸ್ಫಾರ್ಟ್ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವಾದುದರಿಂದ ಇನ್ನೊಂದು ಕೆಲಸವನ್ನು ಮುಳಿಗಾಲ ನಂತರ ತಕ್ಷಣ ತೆಗೆದುಕೊಳ್ಳುತ್ತೇವೆ. ಕೆಂಪರಾಪುರ ರಸ್ತೆಯ ಕೆಲಸ ಪ್ರಗತಿಯಲ್ಲಿದೆ. ಇವುಗಳ ಜೊತೆಗೆ 48 ಸಾವಿರ ರೂಪಾಯಿ, 48 ಸಾವಿರ ರೂಪಾಯಿ, 29 ಸಾವಿರ ರೂಪಾಯಿ, 29 ಸಾವಿರ ರೂಪಾಯಿ, ಮತ್ತು 14 ಸಾವಿರ ರೂಪಾಯಿಗಳ ಐದು ಕೆಲಸಗಳು ಸಹ ನಡೆಯುತ್ತಿವೆ. ಇಷ್ಟೇ ಅಲ್ಲದೆ ಇವುಗಳ ಜೊತೆಗೆ ಈ ವರ್ಷ ಇನ್ನೂ ಅನೇಕ ಕೆಲಸಗಳಾಗಬೇಕಾಗಿವೆ. ಐ. ಜಿ. ರಸ್ತೆ ಮಾಡಿಸುವುದು ಇದೆ. ಆದಕಾರಣ ಒಂದೇ ಸಾರಿ ಎಲ್ಲವನ್ನು ಮಾಡಿಸುವುದಕ್ಕೆ ಆಗುವುದಿಲ್ಲ ಈ ವರ್ಷ ಬಹಳವಾಗಿ ರಸ್ತೆಗಳು ಕೆಟ್ಟಿರುವ ಕಡೆ ರಿಪೇರಿ ಮಾಡಿಸುತ್ತೇವೆ.

Construction of bridges, culverts and causeways in Gubbi and Sira Taluks.

115. SRI T. TARE GOWDA (Kallambela).—Will the Minister for Public Works be pleased to state—

(*a*) whether the Government is aware of the necessity of constructing two or three small bridges, culverts and causeways in Gubbi and Sira Taluks on the P.W.D. road from "Huyildhore to Hosakere *via* Maragondanahalli, Sira Taluk and Manchaldhore in Gubbi Taluk";

(*b*) whether the Government is aware that due to non construction of these bridges, etc., private buses playing up to Maragondanahalli in Sira Taluk and Manchaldhore in Gubbi taluk could not be extended up to Sira, Hosakere and Gubbi in Tumkur Distsict and the same in causing hardships to the public;

(*c*) whether the Executive Engineer, Mudhugiri and Tumkur circle have submitted estimates for the above works to the higher authorities;

(*d*) if so, whether the P.W.D. higher authorities have sanctioned these estimates

(*e*) if not, the action taken to sanction these estimates and cause them to be included in the budget of 1977-78?

SRI M. MALLIKARJUNASWAMI (Minister for Public Works).—

(a) Yes.

(b) Yes.

(c) Not yet.

(d) Does not arise in view of reply to (Clause-c) above,

(e) Will be considered during 1977-78 subject to availability of funds.

ಶ್ರೀ ಟಿ. ತಾರೇಗೌಡ.—ಹೂಯಿಲು ದೊರೆ, ಹೊಸಕೆರೆ, ಶಿರಾ, ಮತ್ತು ಬಾಣಾವರ ರಸ್ತೆಗಳನ್ನು ಮಾಡುವುದಕ್ಕೆ ಹಿಂದಿನ ಸರ್ಕಾರವಿದ್ದ ಕಾಲದಲ್ಲೇ ಪ್ರೊಪೋಸರ್ ಆಗಿ ಮಾರ ಗೊಂಡನಹಳ್ಳಿ, ಹೊಸಕೆರೆ ಬಾರ್ಡರ್‌ರವರೆಗೆ ಎಲ್ಲ ರಸ್ತೆಗಳು ಪೂರ್ಣಗೊಂಡಿವೆ. ಈ ಮಧ್ಯೆ ಮಾರಗೊಂಡನಹಳ್ಳಿಯ ಹತ್ತಿರ 2—3 ಸೇತುವೆಗಳು ಆಗಬೇಕಾಗಿವೆ. ಇದರಿಂದಾಗಿ ತುಮ ಕೂರಿನಿಂದ ಬರತಕ್ಕ ಬಸ್ಸ್‌ಗಳು ಮುಂಚಲದೊರೆಯ ಹತ್ತಿರವೇ ನಿಂತುಕೊಳ್ಳುತ್ತವೆ. ಆದಕಾರಣ ಈ 2—3 ಸೇತುವೆಗಳನ್ನು ಸರ್ಕಾರದವರು ಮಾಡಿಸಿಕೊಟ್ಟರೆ ಜನತೆಗೆ ಅನುಕೂಲವಾಗುತ್ತದೆ ಇದನ್ನು ನಿಧಾನ ಮಾಡದೆ ಈ ವರ್ಷವೇ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ –ಈ ಬಗ್ಗೆ 1971ರಲ್ಲಿ ಒಂದು ಪ್ರೊಪೋಸಲ್ಲನ್ನು ಎಕ್ಸ್‌ಕ್ಯೂಟಿವ್ ಎಂಜಿನಿಯರ್‌ರವರು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಿಗೆ ಕಳುಹಿಸಿಕೊಟ್ಟರು. ಅದನ್ನು ಅವರು ಆಗ ಇಕಾನಮಿ ಮೆಷರ್ ಇದ್ದುದರಿಂದ ಕಳುಹಿಸದೆ ಈ ವರ್ಷ ಅದಕ್ಕೆ 2 ಲಕ್ಷ ರೂಪಾಯಿ ಅಂದಾಜು ಮಾಡಿ ಕಳುಹಿಸಿಕೊಟ್ಟಿದ್ದಾರೆ. ಆದರ ನಕ್ಷೆ ಮತ್ತು ಅಂದಾಜನ್ನು ಸಾಧ್ಯವಾದಷ್ಟು ಬೇಗ ತರಿಸಿಕೊಳ್ಳುತ್ತೇವೆ, ಮತ್ತು 1977-78ರಲ್ಲಿ subject to the availavility of funds ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

Shifting of Bangalore Race Course

153. SRI T.R. SHAMANNA(Fort).—Will the Minister for Finance be pleased to state.—

(a) whether there is any proposal to shift the Race Course from the present place;

(b) if so, when and where it will be shifted?

SRI M.Y. GHORPADE (Minister for Finance).—

(a) No.

(b) Does not arise.

ಶ್ರೀ ಟಿ. ಆರ್. ಶಾಮಣ್ಣ —ಈಗ ಕೆಲವು ತಿಂಗಳುಗಳ ಹಿಂದೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಛೇರ್ಮನ್ನರು ಮತ್ತಿತರರು ರೇಸ್‌ಕೋರ್ಸನ್ನು ಬೇರೆ ಕಡೆ ಹಾಕುವುದಕ್ಕೆ ಪ್ಲಾನ್ ಮಾಡುತ್ತಿದ್ದೇವೆಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದರು. ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದಿವೆ ?

† ಶ್ರೀ ಎಂ. ವೈ. ಘೋರ್ಪಡೆ.—ಅವರು ಆ ರೀತಿ ಆಲೋಚನೆ ಮಾಡಿರಬಹುದು. ಆದರೆ ಆ ಬಗ್ಗೆ ಏನು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ಬಗ್ಗೆ ಏನಾದರೂ ಅವರು ಕಾರ್ಯಕ್ರಮವನ್ನು ಹಾಕಿ ಪ್ರೊಪೋಸಲ್ಲನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಪರಿಶೀಲನೆಮಾಡ್ತೇವೆಂದು ಈ ಬಗ್ಗೆ ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಿದ್ದೇನೆ.